


**ಜೈಲು ಅಧಿಕಾರಿ:** ಅಲ್ಲಯ್ಯ, ರಾತ್ರಿ ಆ ಕಳ್ಳ ನೀನಿದ್ರೂ ಹೇಗೆ ಹೊರಗೆ ಹೋದ?
**ಜೈಲು ಸಿಬ್ಬಂದಿ:** ಅವನು ನಿಮ್ಮ ಹಾಗೆ ಕಂಡ ಸರ್. ಅದಕ್ಕೆ ನಾನು ಏನೂ ಮಾತಾಡದೆ ಮಲಗಿದೆ.

**ಯುವತಿ:** ನಿನ್ನ ಹತ್ತಿರ ಇಲ್ಲ, ನನ್ನ ಹತ್ತಿರ ಇದೆ. ಅದೇನು ಅಂತ ಹೇಳು ನೋಡೋಣ?
**ಯುವಕ:** ನನಗೆ ಗೊತ್ತಿಲ್ಲ. ನೀನೆ ಹೇಳು.
**ಯುವತಿ:** ನಿನ್ನ ಹತ್ತಿರ ಇಲ್ಲದೆ ಇರೋದು, ನನ್ನ ಹತ್ತಿರ ಇರೋದು ಮೇಕಪ್ ಸೆಟ್!

**ಭಾಷಣಕಾರ:** 'ಖರ್ಚು ಉಳಿಸುವ ಬಗ್ಗೆ ಮಾತಾಡಿ, ಐದು ಸಾವಿರ ಕೊಡ್ತೀವಿ' ಅಂತ ಹೇಳಿದ ನೀವು, ಈಗ ಮೂರು ಸಾವಿರ ಕೊಟ್ಟಿದ್ದೀರಿ.
**ವ್ಯವಸ್ಥಾಪಕರು:** ಹೌದು ಹೇಳಿದ್ದೇನೋ ನಿಜ. 'ಎಲ್ಲಿ ಎಲ್ಲಿ ಉಳಿಸಬಹುದೋ, ಅಲ್ಲೆಲ್ಲ ಖರ್ಚು ಉಳಿಸುವುದನ್ನು ಮರೆಯಬೇಡಿ' ಅಂತ ನೀವೇ ಹೇಳಿದ್ರಿ ಅಲ್ವಾ ಅದರ ಪ್ರಭಾವನೇ ಇದು.

**ಪ್ರೇಯಸಿ:** ನಿಮ್ಮ ಕಷ್ಟಗಳನ್ನು ನಾನು ಹಂಚಿಕೊಳ್ಳುತ್ತೇನೆ. ಧೈರ್ಯವಾಗಿರಿ.
**ಪ್ರಿಯಕರ:** ಹೌದಾ? ಮತ್ತೆ, ನಾನೊಬ್ಬರಿಗೆ ಹಣ ಕೊಡಬೇಕು. ಅದನ್ನ ನೀನೇ ಕೊಟ್ಟಿಬಿಡು.
**ಪ್ರೇಯಸಿ:** ನಾನು ಹೇಳಿದ್ದು ಮದುವೆಯಾದ ಬಳಿಕ. ಈಗಲ್ಲ.

**ಆತ:** ನಿಮ್ಮ ಭಾಷಣ ಕೇಳೋಕೆ ಎಷ್ಟೇ ದೂರ ಆದ್ರೂ ನಾನು ಬರ್ತೀನಿ ಸರ್.
ಭಾಷಣಕಾರ: ನನ್ನ ಭಾಷಣ ಅಂದ್ರೆ ಅಷ್ಟೊಂದು ಇಷ್ಟವೇ?
**ಆತ:** ಹಾಗೇನಿಲ್ಲ, ಬೇರೆಯವರ ಭಾಷಣದಲ್ಲಿ ಕೂರೋಕೆ ಸ್ಥಳವೇ ಇರೋದಿಲ್ಲ. ನಿಮ್ಮ ಭಾಷಣದಲ್ಲಿ ಸ್ಥಳನೂ ಇರುತ್ತೆ, ಒಳ್ಳೆ ನಿದ್ದೆನೂ ಬರುತ್ತೆ ಅದಕ್ಕೆ.

**ಪಕ್ಕದ ಮನೆಯಾತ:** ಇವತ್ತೊಂದಿನ ನಿಮ್ಮ ತಬಲಾ ಕೊಡ್ತೀರಾ?
**ಈತ:** ಏಕೆ, ನೀವು ತಬಲಾ ಅಭ್ಯಾಸ ಮಾಡ್ತೀರಾ?
**ಪಕ್ಕದ ಮನೆಯಾತ:** ಇಲ್ಲ, ಇವತ್ತಾದರೂ ಚೆನ್ನಾಗಿ ನಿದ್ದೆ ಮಾಡೋಣ ಅಂತ.

**ಆತ:** ಕುಡಿತಕ್ಕಿಂತ ಹೆಂಡತಿ ಅಪಾಯ.
**ಈತ:** ಹೇಗೆ?
**ಆತ:** ನೋಡು ಕುಡಿದಾಗಷ್ಟೇ ತಲೆ ಧಿಮ್ ಅನ್ನುತ್ತೆ. ಹೆಂಡ್ತಿ ಯಾವಾಗಲೂ ತಲೆ ಧಿಮ್ ಅನ್ನುವ ಹಾಗೆ ಮಾಡ್ತಾನೇ ಇರ್ತಾಳೆ.

**ನಾಣಿ:** ಯಾಕೋ ಕೇಶವ, ಹೋದ ವಾರದ ವಾರಪತ್ರಿಕೆ ಹರಿದು ಹಾಕಿದ್ದೀಯಾ, ಇವತ್ತು ದಿನಪತ್ರಿಕೆ ಹರಿದು ಹಾಕಿದ್ದೀಯಾ?
**ಕೇಶವ:** ಇನ್ನೇನು ಮತ್ತೆ, ಹೋದ ವಾರದ ಭವಿಷ್ಯ ಕೂಡ ಚೆನ್ನಾಗಿರಲಿಲ್ಲ, ಈ ದಿನದ ಭವಿಷ್ಯ ಕೂಡ ಚೆನ್ನಾಗಿಲ್ಲ. ಭವಿಷ್ಯ ಬರೆದವರನ್ನು ಏನೂ ಮಾಡೋಕೆ ಆಗಲ್ಲ. ಅದಕ್ಕೆ ಪತ್ರಿಕೆಯನ್ನು ಹರಿದೆ.




**ಆತ:** ಒಂದು ವಾರದಿಂದ ಈ ಆಸ್ಪತ್ರೆಯಲ್ಲಿ ಒಬ್ಬರೂ ಸಾಯಲಿಲ್ಲ.
**ಈತ:** ಅದು ಹೇಗೆ ಸಾಧ್ಯ?
**ಆತ:** ಡಾಕ್ಟರ್‌ಗಳು ಮುಷ್ಕರ ಹೂಡಿದ್ದಾರೆ.

ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ